ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಪೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 29 Udp/1263/2015-17 || R.NO.50495/91 ॥ ತಾರೀಕು : 02–08–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

## ಕೋಟ್ಯಾಂತರ ವ್ಯವಹಾರ : ಭವಿಷ್ಯ ಡೋಲಾಯಮಾನ

# ಎಗ್ರಿಗೋಲ್ಡ್ ಕಂಪೆನಿ ಏಜೆಂಟರು ಕಂಗಾಲು

**ಕೇವಲ ಕುಂದಾಪುರ ತಾಲೂಕಿನಲ್ಲಿಯೇ ನಾಲ್ಕು ಸಾವಿರಕ್ಕೂ ಹೆಚ್ಚು ಮಂದಿ ಎಗ್ರಿಗೋಲ್ಡ್ ಕಂಪೆನಿ ನಂಬಿಕೊಂಡು ಹೊಟ್ಟೆಪಾಡಿನ ಉದ್ಯೋಗ ನಡೆಸುತ್ತಿದ್ದರೆ, ದಕ್ಷಿಣ ಭಾರತದ ಎಷ್ಟು ಲಕ್ಷ ಮಂದಿ ಸಮಸ್ಯೆಗೆ ಒಳಗಾಗಿರಬಹುದು ಎಂದು ಅಂದಾಜಿಸಬಹುದು. ಎಗ್ರಿಗೋಲ್ಡ್ ಸೇರಿದಂತೆ ಅಂತಹ 23 ಕಂಪೆನಿಗಳ ಮೇಲೆ ಕಾನೂನು ಬಾಹಿರ ವ್ಯವಹಾರಕ್ಕಾಗಿ ಆಂಧ್ರ ಸರಕಾರ ಹಾಗೂ ರಿಸರ್ವ್ ಬ್ಯಾಂಕ್ ಕ್ರಮಕೈಗೊಳ್ಳುತ್ತಿದ್ದರೆ ಕನ್ನಡಿಗರ ಪರಿಸ್ಥಿತಿ ಕೇಳುವವರಿಲ್ಲ. ಕರ್ನಾಟಕ ಸರಕಾರದ ಮೇಲೆ ಒತ್ತಡ ಹಾಕಿ ಅಮಾಯಕ ಗ್ರಾಹಕರಿಗೆ ನ್ಯಾಯ ಒದಗಿಸಬೇಕಾಗಿದೆ.**






ಕುಂದಾಪುರ ತಾಲೂಕಿನ ಅಂದಾಜು 4 ಸಾವಿರ ಏಜೆಂಟರೂ ಸೇರಿ ಲಕ್ಷಾಂತರ ಏಜೆಂಟರ 6700 ಕೋಟಿ ರೂ ಹಣ ಗ್ರಾಹಕರಿಗೆ ಮರುಪಾವತಿಸುವ ಕುರಿತು ಕಳೆದ ಎರಡು ವರ್ಷಗಳಿಂದ ಮಾಧ್ಯಮಗಳಲ್ಲಿ ಏನೇನೋ ಸುದ್ಧಿಗಳು , ಸ್ಪಷ್ಟನೆಗಳು, ನ್ಯಾಯಾಲಯದ ವಿಚಾರಣೆಗಳು ಪ್ರಕಟವಾಗುತ್ತಿದ್ದರೂ ಹಣ ನೀಡಿದವರಿಗೆ ಸದ್ಯೋಭವಿಷ್ಯದಲ್ಲಿ ಮರುಪಾವತಿ ಆಗುವ ಲಕ್ಷಣಗಳು ಗೋಚರಿಸದಿರುವ ಹಿನ್ನೆಲೆಯಲ್ಲಿ ಏಜೆಂಟರು ಹಾಗೂ ಗ್ರಾಹಕರು ಕಂಗಾಲಾಗಿದ್ದಾರೆ. ಏಜೆಂಟರನ್ನು ಪುಸಲಾಯಿಸಿ ತಮ್ಮ ವ್ಯವಹಾರ ಕುದುರಿಸಿಕೊಂಡ ಸುಪರ್‌ವೈಸ್‌ರ್‌ಗಳು ವ್ಯವಸ್ಥಾಪಕರು ಈಗ ಏನೊಂದು ಪ್ರತಿಕ್ರಿಯೆ ತೋರದೆ ಸುಮ್ಮನಾಗಿ ಬಿಟ್ಟಿರುವುದು ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ಆಂಧ್ರ ಪ್ರದೇಶದ ಸರಕಾರ ಈ ವಿಚಾರದಲ್ಲಿ ಕ್ರಮ ಕೈಗೊಂಡು ಸಿಐಡಿ ವಿಚಾರಣೆ ಮಾಡಿದ್ದರೂ, ನ್ಯಾಯಾಲಯ ಎಗ್ರಿಗೋಲ್ಡ್ ಸಂಸ್ಥೆ ಹಾಗೂ ಚೇಯರ್‌ಮೆನ್ ಆಸ್ತಿ ಮುಟ್ಟುಗೋಲು ಹಾಕಲು ಆದೇಶ ನೀಡಿದ್ದರೂ ಕ್ರಮಗಳು ತೀರಾ ಮಂದಗತಿಯಲ್ಲಿ ಸಾಗುತ್ತಿರುವ ಹಿನ್ನಲೆಯಲ್ಲಿ ಹಣ ಹೂಡಿದ ಕರ್ನಾಟಕದ ಮಂದಿ ದಾರಿಕಾಣದಂತಾಗಿದ್ದಾರೆ.

ಎಗ್ರಿಗೋಲ್ಡ್ ಚೇಯರ್‌ಮೆನ್ ವಿ.ಆರ್.ರಾವ್, ಹಾಗೂ ಎಂ.ಡಿ.,ಅವ್ವಾ ವೆಂಕಟ ಶೇಷ ನಾರಾಯಣ ರಾವ್ ಸೇರಿದಂತೆ ಎಗ್ರಿಗೋಲ್ಡ್ ಕಂಪೆನಿ ಠೇವಣಿ ಸಂಗ್ರಹಿಸಿರುವ ರೀತಿ ಕಾನೂನು ಬಾಹಿರ ವಾಗಿದ್ದು ಯಾವುದೇ ಮಂಜೂರಾತಿ, ಒಪ್ಪಿಗೆ ಪಡೆಯದೇ ನಡೆಸಿದ ವ್ಯವಹಾರ ವಾಗಿದೆ ಎಂದು ರಿಸರ್ವ್ ಬ್ಯಾಂಕ್ ಸಹ ಪ್ರತಿಕ್ರಿಯೆ ನೀಡಿರುವ ವಿಚಾರ ಕೇಳಿ ಲಕ್ಷಾಂತರ ರೂ ಠೇವಣಿ ಇಟ್ಟವರ ಸ್ಥಿತಿ ತ್ರಿಶಂಕುವಾಗಿದೆ.

ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರನ್ನು ಬಂಧಿಸಲಾಗಿದೆ. ತಮ್ಮ ಸೊತ್ತುಗಳನ್ನು ಮುಟ್ಟುಗೋಲು ಹಾಕುವ ಬದಲು ಅದನ್ನು ಹರಾಜು ಮಾರಾಟ ಮಾಡಿ 6700 ಕೋಟಿ ರೂ ಪಾವತಿಸಲು ವ್ಯವಸ್ಥೆ ಮಾಡಬಹುದು ಎಂದು ಎಗ್ರಿಗೋಲ್ಡ್ ವಕೀಲರು ಉಚ್ಛ



ನ್ಯಾಯಾಲಯಕ್ಕೆ ಒಪ್ಪಿಗೆ ನೀಡಿದರೂ ಈ ಪ್ರಕ್ರಿಯೆ ಕಾರ್ಯಗತಗೊಳಿಸುವುದು ಅಷ್ಟು ಸುಲಭವಲ್ಲ ಎನ್ನುವುದು ಅರಿವಾಗಿದೆ.

ಆಂಧ್ರಪ್ರದೇಶ ಸರಕಾರ ಆಂಧ್ರ ರಾಜ್ಯದ ಗ್ರಾಹಕರಿಗಾಗಿ ತಮ್ಮ ಠೇವಣಿ ಹಾಗೂ ವಿವರ ನೀಡುವಂತೆ ವೆಬ್‌ಸೈಟ್ **protection ofap depositors.com** ಆರಂಭಿಸಿತ್ತು. ಆಂಧ್ರ ಸರಕಾರದ ಸಿಐಡಿ ವಿಭಾಗ ಈ ಬಗ್ಗೆ ಪ್ರಕಟಣೆ ನೀಡಿದೆ ಎನ್ನಲಾಗಿತ್ತು. ಆದರೆ ಕರ್ನಾಟಕದ ಗ್ರಾಹಕರಿಗಾಗಿ ಯಾವ ವೆಬ್‌ಸೈಟೂ ಇಲ್ಲ ವ್ಯವಸ್ಥೆಯೂ ಇಲ್ಲ ಎಂಬಂತಾಗಿದೆ.

ಬಹುತೇಕ ಏಜೆಂಟರೆಲ್ಲ ಅಮಾಯಕ ರಾಗಿದ್ದು ಗ್ರಾಮೀಣ ಪ್ರದೇಶದವರಾದು ದರಿಂದ ಈ ಬಗ್ಗೆ ಹೋರಾಟ ನಡೆಸುವ ರೀತಿಯೂ ಅವರಿಗೆ ತಿಳಿದಿಲ್ಲ ಹಾಗಾಗಿ ಸರಿಯಾದ ಸಂಘಟನೆಯೂ ಕರ್ನಾಟಕದಲ್ಲಿ ನಡೆದಿಲ್ಲ. ಕುಂದಾಪುರದಲ್ಲಂತೂ ಉದ್ಯೋಗ ಕಳೆದುಕೊಂಡು ಕಣ್ಣೀರು ಹಾಕುವ ಗ್ರಾಹಕರ ಮನಸ್ಥಿತಿ ಖೇದಕರವಾಗಿದೆ. ಎಷ್ಟೋ ಮಂದಿ ಖಿನ್ನರಾಗಿ ಹೋಗಿದ್ದಾರೆ.

**23 ಕಂಪೆನಿಗಳ ಮೇಲೆ ಕ್ರಮ :**

ಆಂಧ್ರಪ್ರದೇಶ ಸರಕಾರ ಎಗ್ರಿಗೋಲ್ಡ್, ಸಿರಿಗೋಲ್ಡ್, ಅಭಯ ಗೋಲ್ಡ್, ಎನ್ ಮಾರ್ಟ್, ಪಿಎಸಿ,ಎಲ್, ಶ್ರೀ ವತ್ಸಲ, ಅಕ್ಷಯ ಗೋಲ್ಡ್ , ಅಕ್ಷಿತಾ ಗೋಲ್ಡ್, ಅವಮ್ ಗೋಲ್ಡ್ , ವಸಂತ ಗೋಲ್ಡ್, ಫಾರ್ ಎವರ್, ಬೊಬ್ಬರಿಲ್ಲು, ಮೈತ್ರಿ, ಎಸ್ಸೈಎಂಎಸ್, ಗೋಲ್ಡ್ ಕ್ವೆಸ್ಟ್, ಆರ್.ಎಂ.ಡಿ. ಇನ್‌ಪೊಟೆಕ್ , ಮಹೇಶ್ವರ ಗೆಟ್ ಇಟ್, ವಿ.ಆರ್.ಚಿಟ್ಸ್, ಸುಭಾದರ್ಶಿಚಿಟ್ಸ್, ಎಮ್‌ವೆ, ಎಚ್‌ಐಎಂ ಮುಂತಾದ ಇಪ್ಪತ್ತಮೂರು ಕಂಪೆನಿಗಳ ಮೇಲೆ ವಿಚಾರಣೆ ನಡೆಸುತ್ತಿದೆ. ದಶಕಗಳಿಂದ ಗ್ರಾಹಕರ ಸಂಪರ್ಕ ಹೊಂದಿರುವ ಈ ಕಂಪೆನಿಗಳು ನ್ಯಾಯ ಬಾಹಿರ ಕ್ರಮ ಅನುಸರಿಸಿವೆ. ದೇಶಕ್ಕೂ ನಷ್ಟ ಮೂಡಿವೆ ಎಂಬ ಆಪಾದನೆ ಎದುರಿಸುತ್ತಿವೆ.

# ವಿದ್ಯಾರ್ಥಿ ರಾಘವೇಂದ್ರ ಶೆಟ್ಟಿ ಬಸ್ ಅಪಘಾತದಲ್ಲಿ ಸಾವು : ಆಕ್ರೋಶ

ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಸಂಚಾರದಲ್ಲಿ ಬಸ್ಸು ನಿರ್ವಾಹಕರಿಂದ ಅನುಭವಿಸುತ್ತಿರುವ ಕಿರಿಕಿರಿ, ಅವಹೇಳನ ಮತ್ತು ಬಸ್ಸು ವೇಳಾ ವ್ಯವಸ್ಥೆಗಳ ಧ್ವನಿ ಎತ್ತಿದನೋ ಅದೇ ವಿದ್ಯಾರ್ಥಿಯೇ ನಿನ್ನೆ ಕಿಕ್ಕಿರಿದ ಸರ್ಕಾರಿ ಬಸ್ಸಿನಿಂದ ಉರುಳಿ ಸಾವನ್ನಪ್ಪಿದ ದುರ್ಘಟನೆ ನಡೆಯಿತು. ವಿಪರ್ಯಾಸವೆಂದರೆ ಇದೇ ಅಲ್ಲವೇ. ಅಂದ



ಹಾಗೆ ಬಸ್ಸುಗಳ ವಿರುದ್ಧ ಅಷ್ಟೂ ಸಮಯದಿಂದ ಮಡುಗಟ್ಟಿ ನಿಂತಿದ್ದ ವಿದ್ಯಾರ್ಥಿಗಳ ಆಕ್ರೋಶ ಎನ್ನುವುದು ಈ ಸಂದರ್ಭದಲ್ಲಿ ತಡೆ ಮುರಿದ ಜಲಪಾತದಂತೆ ಭೋರ್ಗರೆದು ಬಿಟ್ಟಿದೆ.

ಘಟನೆಯ ವಿವರ : ಉಪ್ಪುಂದದ ಸದಾಶಿವ ಶೆಟ್ಟಿ ಹಾಗೂ ಸವಿತಾ ದಂಪತಿಗಳ ಹಿರಿಯ ಮಗನೇ ಮೃತ ದುರ್ದೈವಿ ರಾಘವೇಂದ್ರ ಶೆಟ್ಟಿ(21) ಈತ ಕುಂದಾಪುರ ಬಿ.ಬಿ. ಹೆಗ್ಡೆ ಕಾಲೇಜಿನ ಅಂತಿಮ ಬಿಕಾಂ ವಿದ್ಯಾರ್ಥಿ. ಭಟ್ಕಳದಿಂದ ಕುಂದಾಪುರದ ಕಡೆ ಸಾಗುತ್ತಿದ್ದ ಕೆ.ಎಸ್.ಆರ್.ಟಿ.ಸಿ ಬಸ್ ನಲ್ಲಿ ಸುಮಾರು 50ಕ್ಕೂ ಅಧಿಕ ವಿದ್ಯಾರ್ಥಿಗಳಿದ್ದು, ಉಪ್ಪುಂದದ ವಿದ್ಯಾರ್ಥಿ ಆದ ರಾಘವೇಂದ್ರ ಶೆಟ್ಟಿ ಕುಂದಾಪುರ ಕಾಲೇಜಿಗೆ ತೆರಳಲೆಂದು ಬಸ್ ನಿಲ್ದಾಣದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ಏರಿ ಹಿಂಬಾಗಿಲಿನಲ್ಲಿ ನಿಂತಿದ್ದಾಗ ಯಮರೂಪಿ ಬಸ್ಸು ಬಂತು. ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಫುಟ್‌ಬೋರ್ಡ್‌ನಲ್ಲಿ ನಿಂತಿದ್ದ ವಿದ್ಯಾರ್ಥಿಗೆ ಬಡಿಯಿತು. ಕೂಡಲೇ ವಿದ್ಯಾರ್ಥಿಯನ್ನು ಕುಂದಾಪುರದ ಖಾಸಗಿ ಆಸ್ಪತ್ರೆಗೆ ಸಾಗಿಸುವ

( 12ನೇ ಪುಟಕ್ಕೆ)



ಸಾವಿರಾರು ವಿದ್ಯಾರ್ಥಿಗಳು ಕುಂದಾಪುರಕ್ಕೆ ಬರುವುದರಿಂದ ಕಾಲೇಜು ಸಮಯದಲ್ಲಿ ನೂಕುನುಗ್ಗಲು ಉಂಟಾಗುತ್ತದೆ. ಫುಟ್‌ಬೋರ್ಡ್‌ನಲ್ಲಿ ನೇತಾಡುವ ವಿದ್ಯಾರ್ಥಿಗಳು ಸದಾ ಅಪಾಯ ಎದುರಿಸುತ್ತಾರೆ.




ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ



ವಸಂತ ಬೇಕರಿ

ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.



ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ

ಫೋನ್ : 08254–230503, ಮೊ: 9448171188

